ಬಾ.ರಂ. ಸುರೇಶ್, ಶಿವಮೊಗ್ಗ

ಮನೆಯಾಕೆ ಹೇಳಿದ್ದನ್ನೆಲ್ಲ ಮಾಡಿದರೂ ಹೊಗಳದೆ ಗಲಾಟೆ ಮಾಡುವಳಲ್ಲ...?



ಪಾತ್ರೆ ಎತ್ತಿಟ್ಟು ಕಸ ಹೊರಹಾಕಿ ಎಂದರೆ ಮೊಬೈಲಲ್ಲೇ ಮುಳುಗಿದ್ದು ಪಾತ್ರೆ ಹೊರಹಾಕಿ ಕಸ ಎತ್ತಿಟ್ಟರಂತಲ್ಲ!

ಬಿ. ಚಂದ್ರೇಗೌಡ, ಬೆಂಗಳೂರು

ಹುಡುಗಾಟಕ್ಕೂ ಹುಡುಕಾಟಕ್ಕೂ ಏನು ವ್ಯತ್ಯಾಸ?

ಇಲ್ಲಿ ಕಾಲೆಳೆಯುವುದು ಸಹಜ, ಅಲ್ಲಿ ಕಾಲ ಎಳೆಯುವುದು ಸಹಜ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಮನಸ್ಸಿಗಿಂತ ದೊಡ್ಡದು ಯಾವುದು?

ಅದನ್ನು ಹತೋಟಿಯಲ್ಲಿಡುವ ವಿವೇಕ.

ಪಿ. ಜಯವಂತ ಪೈ, ಕುಂದಾಪುರ

ವ್ಯಾಜ್ಯಕ್ಕೂ ತ್ಯಾಜ್ಯಕ್ಕೂ ವ್ಯತ್ಯಾಸವೇನು?

ಕಸ ಮನೆಯಲ್ಲಿ ತುಂಬಿದರೆ ತ್ಯಾಜ್ಯ, ಮನದಲ್ಲಿ ತುಂಬಿದರೆ ವ್ಯಾಜ್ಯ.

ವ. ಉಮೇಶ ಕಾರಂತ, ಮಂಗಳೂರು

ಪುಸ್ತಕ ಮಸ್ತಕದ ನಡುವೆ ಏನಿಹುದು?



ಪರೀಕ್ಷಾ ಸಮಯದಲ್ಲಂತೂ ತಡೆಯಲಾರದ ನಿದ್ದೆ.

ವಿ. ಹೇಮಂತಕುಮಾರ್, ಬೆಂಗಳೂರು

ವರದಕ್ಷಿಣೆಗೂ ಗುರುದಕ್ಷಿಣೆಗೂ ವ್ಯತ್ಯಾಸವೇನು ಸರ್?

ಎರಡೂ ಬಿಲ್ಲುಗಳೇ ಆದರೂ ಅದು ಪ್ರೀ ಪೇಯ್ಡ್, ಇದು ಪೋಸ್ಟ್ ಪೇಯ್ಡ್.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಮೌನದ ಶಕ್ತಿ ಹೆಚ್ಚಾಗುವುದು ಯಾವಾಗ?

ಜೊತೆಗೆ ಪತಿಯೊಡನೆ ಅಸಹಕಾರ ಚಳವಳಿಯೂ ಆರಂಭವಾದಾಗ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದೇವರಿಗೆ ನಾವು ಕಾಣಿಕೆ ಕೊಡಬೇಕೋ, ದೇವರೇ ನಮಗೆ ಕಾಣಿಕೆ ಕೊಡಬೇಕೋ?

ದೇವನೇ ಕೊಡಬೇಕು ಈ ವಿಷಯದಲ್ಲಿ ನಾವು ಪರ್ಮನೆಂಟ್ ಭಿಕ್ಷುಕರು.

ಮಹಾವೀರ ಕಾಸರ, ಶಿವಮೊಗ್ಗ

ಆಫೀಸಿಗೆ ಗೈರಾದರೆ ರಜೆ ಚೀಟಿ ಕೊಡಬೇಕು, ಇಲ್ಲದಿದ್ದರೆ ವೇತನ ಕಡಿತ. ಸಂಸತ್ತು, ಸದನಗಳಿಗೆ ಗೈರಾದರೆ ಏನು ಶಿಕ್ಷೆ?

ಯೋಗ್ಯರು ಗೈರಾದರೆ ನಷ್ಟವಾಗುವುದರಿಂದ ಶಿಕ್ಷೆ. ಅಯೋಗ್ಯರು ಗೈರಾದರೆ ಒಳಿತಾಗುವುದರಿಂದ ಮಾಫಿ.

ನರಸಿಂಹ ಪೈ, ಕಾಸರಕೋಡ

ಗಂಡಸರ ದೈವಭಕ್ತಿಯೇಕೆ ಹೆಂಗಸರಷ್ಟು ಗಾಢವಾಗಿಲ್ಲ?

ಹೆಣ್ಣು ಭಕ್ತೆಯನ್ನು ಅಪ್ಸರ ದಾನವ ಯಕ್ಷ ಗಂಧರ್ವರಾರೂ ಕಾಡಿದ ದಾಖಲೆ ಇಲ್ಲ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ಕೊರೊನಾ ಪಾಸಿಟಿವ್ ಬಂದಿದೆ. ದೂರವಿರಿ ಎಂದು ರಾಜಕಾರಣಿಗಳು ಎಫ್‌ಬಿಯಲ್ಲಿ ಪ್ರಕಟಿಸಲು ಕಾರಣವೇನು?

ಆಪ್ತರು ಹತ್ತಿರ ಸುಳಿದು, ಹೋಗಿಬಿಟ್ಟರೆ, ಮತಗಳು ಕಡಿಮೆ ಆಗಿಬಿಡುತ್ತವಲ್ಲ!

ಸುಮನಾ, ತೆಲಂಗಾಣ

ಜನಬಳಕೆಯ ಬಾವಿಗೂ, ಸದನದ ಬಾವಿಗೂ ಇರುವ ವ್ಯತ್ಯಾಸವೇನು ರಾಂಜೀ?

ಇಲ್ಲಿ ನೀರೆತ್ತುತ್ತಾರೆ, ಅಲ್ಲಿ ನೀರಿಳಿಸುತ್ತಾರೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಒಗ್ಗರಣೆ ಇಲ್ಲದ ಅಡುಗೆಗೂ, ವರದಕ್ಷಿಣೆ ಇಲ್ಲದ ಮದುವೆಗೂ ಏನು ವ್ಯತ್ಯಾಸ?

ಇದು ರುಚಿಸದು, ಅದು ರುಚಿಸುತ್ತದೆ.

ಜಗದೀಶ ಬಿ. ಹೊಸೂರು, ಮೈಸೂರು

ಆನ್‌ಲೈನ್‌ನಲ್ಲಿ ಅಕ್ಷರಗಳ ಓದು–ಬರಹ ಕಲಿತವರು, ಕಲಿಸಿದವರಲ್ಲಿ ಸಾಧಕರು ಯಾರು?

ಅಂತಹ ಆನ್‌ಲೈನ್ ಆ್ಯಪ್‌ಗಳನ್ನು ಕಂಡುಹಿಡಿದವರು.

## ಬಹುಮಾನಿತ ಪ್ರಶ್ನೆ

ಅಶೋಕ ಆರ್. ಹಾಲಣ್ಣವರ, ಲಕ್ಷ್ಮೇಶ್ವರ

ಸಾಧಾರಣ ಮೈಕಟ್ಟು, ಗೋಧಿ ಬಣ್ಣ ಅಂತಾರೆ. ಇನ್ನುಳಿದ ಧಾನ್ಯಗಳ ಬಣ್ಣದ ಬಗ್ಗೆ ಏಕೆ ಹೇಳಲ್ಲ ಸಾರ್...?

ರಾಗಿಯದು ವೆಸ್ಟಿಂಡೀಸಿಗೆ, ಜೋಳದ್ದು ಚೀನಾಗೆ, ಅಕ್ಕಿಯದು ಅನಿಮಿಕ್‌ಗೆ ಸೂಕ್ತ. ನಮಗೆ ಗೋಧಿಯೇ ಸೈ.

ಅಮರಯ್ಯ ಪತ್ರಿಮಠ, ಸುರಪುರ

ಮಾತಲ್ಲೇ ಪಂಚ್ ಮಾಡುವವರನ್ನು ಏನೆನ್ನಬೇಕು?

ಪಂಚಕ್ಷರಿ.

ಹರಿಪ್ರಸಾದ್ ಸಗ್ರಿ, ಕುಂಜಿಬೆಟ್ಟು

ಕೆಲವೊಮ್ಮೆ ಕೋಟ್ಯಧೀಶನೂ ಬಿಟ್ಟಿಯಾಗಿ ಸಿಗುವ ಕಾಫಿಗೆ ಹಂಬಲಿಸುತ್ತಾನಲ್ಲಾ...?

ಅವನು ಕೋಟ್ಯಧೀಶನಾದದ್ದೇ ಅವರಿವರು ಬಿಟ್ಟಿದ್ದರಿಂದ, ಬಿಟ್ಟಿ ಸಿಕ್ಕಿದ್ದರಿಂದ ಅಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಹುಲಿಗಳಿಗೆ ಹೇಳದೆ ಕೇಳದೆ ಮಾನವರು ಹುಲಿ ದಿನಾಚರಣೆ ಮಾಡಬಹುದೆ?



ಹೇಳಲು ಹೋದರೆ ಹುಲಿಗಳೇ ನರಮಾಂಸ ದಿನಾಚರಣೆ ಮಾಡುತ್ತವಂತಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು

ಕುಡುಕರಿಗೆ ಎಳನೀರು ರುಚಿಸುವುದಿಲ್ಲವಂತೆ?

ನಿಂಬೆಹಣ್ಣು ಹಿಂಡಿ ಕೊಡಿ. ಸಮಾಜದ ಹುಳಿಗಳಿಗೆ ಹುಳಿಯೇ ಪ್ರಾಣ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಖಿನ್ನತೆಯ ನೆಪದಲ್ಲಿ ಪುರುಷರು ಸ್ತ್ರೀ ಮನೋರೋಗ ತಜ್ಞರ ಬಳಿಗೇ ಹೋಗುವರಲ್ಲ?

ಕಡೆಗೂ ಇವರ ಮಾತನ್ನು ಗಮನವಿಟ್ಟು ಕೇಳುವ ಹೆಣ್ಣು ಸಿಗುವುದು ಅಲ್ಲಿ ಮಾತ್ರವಂತೆ!

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in